

# ಹೊಳೆ ದಾಸವಾಳ ಹೂವು

■ ಚಿತ್ರ ಲೇಖನ:
ಸೌಖ್ಯ ಮೋಹನ್

ನಾವು ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ಕಾಡು ಮೇಡು, ಬ್ಯಾಣ ಬೆಟ್ಟ ಅಲೆದು ಹುಡುಕಿ ತಿನ್ನುತ್ತಿದ್ದ ಹಣ್ಣುಗಳಲ್ಲಿ ಸುಲಭವಾಗಿ ಸಿಕ್ಕುತ್ತಿದ್ದುದೇ 'ಹೊಳೆದಾಸವಾಳದ ಹಣ್ಣು'. ಇದನ್ನು ಕುಸುಮಾಲೆ ಹಣ್ಣು ಎಂದೂ ಕರೆಯುತ್ತಾರೆ. ನೋಡಲು ಚಿಕ್ಕ ಚಿಕ್ಕ ಕೆಂಪು ಹೂಗಳ ಗುಚ್ಛ. ಜೊತೆಗೆ ಒಂದಿಷ್ಟು ಪುಟ್ಟ ಪುಟ್ಟ ಕೆಂಪು ಸಿಹಿ ಮಿಶ್ರಿತ ಒಗರು ಹಣ್ಣುಗಳು. ಇದು ಪೊದೆ ರೀತಿಯ ಸಸ್ಯವಾದ್ದರಿಂದ ಹೆಚ್ಚು ಎತ್ತರವಿಲ್ಲ. ಮಕ್ಕಳಿಗೆ ಸುಲಭವಾಗಿ ಸಿಗುತ್ತಿತ್ತು.

ಈ ಹೊಳೆದಾಸವಾಳದಲ್ಲೇ 2 ವಿಧಗಳಿವೆ. ಒಂದು ಕೆಂಪು ಬಣ್ಣದ್ದು, ಇನ್ನೊಂದು ಹಳದಿ ಬಣ್ಣದ್ದು. ಹಳದಿ ಬಣ್ಣದ ಹೊಳೆದಾಸವಾಳವನ್ನು ಮಲೆನಾಡಿನಲ್ಲಿ ಔಷಧಿಗೆ ಹೆಚ್ಚು ಬಳಸುತ್ತಾರೆ. ಇದರ ಬೇರು ಮತ್ತು ಹೂವು ಎರಡೂ ಔಷಧಿ ಬಳಕೆಗೆ ಯೋಗ್ಯವಾದದ್ದು. ಇದರ ವೈಜ್ಞಾನಿಕ ಹೆಸರು ಇಕ್ಸೋರ ಕಾಕ್ಸಿನಿಯ. ಸಂಸ್ಕೃತದಲ್ಲಿ ಪೀತಬಂಧೂಕ ಎಂದು ಉಲ್ಲೇಖವಿದೆ. ಕುಟುಂಬ ರೂಬಿಯೇಸಿ. ಆಯುರ್ವೇದದ ಔಷಧಿಗಳಲ್ಲಿ ಕೂಡ ಹೆಚ್ಚಾಗಿ ಬಳಸುತ್ತಾರೆ.

ಇದು ತಂಪು ಗುಣವನ್ನು ಹೊಂದಿದೆ. ಬಾಯಿ ಮತ್ತು ಜಠರದ ಹುಣ್ಣನ್ನು ಕಡಿಮೆ ಮಾಡಲು ಇದರ ಹೂವಿನ ತಂಬುಳಿ ಮತ್ತು ಚಟ್ನಿ ಬಹಳ ಉಪಯುಕ್ತ. ಇದರ ತಂಬುಳಿ ಮಾಡುವಾಗ ಇದರ ಹೂವನ್ನು ಹುರಿಯುವ ಅಗತ್ಯ ಇಲ್ಲ. ಚಿಕ್ಕ ಮಕ್ಕಳಿಗೆ ಮತ್ತು ಬಾಣಂತಿಗೆ ಮಲಬದ್ಧತೆ ಆದಾಗ ಇದರ ಹೂವನ್ನು ಹಾಲಿನಲ್ಲಿ ಕುದಿಸಿ ಸಕ್ಕರೆ ಬೆರೆಸಿ ಕುಡಿಯಲು ಕೊಡುತ್ತಾರೆ. ಇದರ ಹೂವನ್ನು ಉಪಯೋಗಿಸುವಾಗ ಹೂವಿನ ಕುಸುಮವನ್ನು ತೆಗೆಯಲು ಮರೆಯಬಾರದು ಎನ್ನುತ್ತಾರೆ, ಇದನ್ನು ಹಿತ್ತಿಲಲ್ಲಿ ಬೆಳೆಸಿ ಉಪಯೋಗಿಸುತ್ತಿರುವ ತಲಕಾಲುಕೊಪ್ಪದ ಗೃಹಿಣಿ ಗಿರಿಜಾ.

ಇದರ ಬೇರನ್ನು ನೀರಿನಲ್ಲಿ ತೇಯ್ದು ಮಕ್ಕಳಿಗೆ ಕೊಡುವುದರಿಂದ ರಕ್ತ ಶುದ್ಧಿಯಾಗುತ್ತದೆ. ಹಾಗೂ ತುರಿ, ಕಜ್ಜಿ ಕಡಿಮೆಯಾಗುತ್ತದೆ. ಕೀಟಗಳು ಕಡಿದು ತುರಿಕೆ ಉಂಟಾಗಿ ಊತವಾಗಿದ್ದರೆ ಇದರ ತೊಗಟೆಯನ್ನು ನುಣ್ಣನೆ ಅರೆದು ಕಡೆದ ಮಜ್ಜಿಗೆಯಲ್ಲಿ ಸೇವಿಸಿದರೆ ಬೇಗ ವಾಸಿಯಾಗುತ್ತದೆ.

ಗುಡ್ಡ ಬೆಟ್ಟಗಳಲ್ಲಿ ಹೆಚ್ಚಾಗಿ ಕೆಂಪು ದಾಸವಾಳವೇ ಕಂಡುಬರುತ್ತದೆ. ಹಿಂದೆಲ್ಲ ಮಲೆನಾಡಿನ ಪ್ರತಿಯೊಂದು ಮನೆಯಲ್ಲೂ ಇರುತ್ತಿದ್ದ ಈ ಹಳದಿ ಹೊಳೆದಾಸವಾಳ ಇತ್ತೀಚೆಗೆ ಬಹಳ ಅಪರೂಪವಾಗಿದೆ. ಉಳಿಸಿ ಬೆಳೆಸಬೇಕಾದ ಅನಿವಾರ್ಯತೆ ಇದೆ. ●

